ಸಾಕ್ಷಿಯನ್ನು ದಿನಾಂಕ: 05.06.2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಂ.ಜಿ. ವಕೀಲರಿಂದಃ**

ಸಾಂತಾ ಫರ್ನಾಂಡಿಸ್ ನನ್ನ ತಂದೆ ಎಂದರೆ ಸರಿ. ಫಿಯಾದಾದ ಫರ್ನಾಂಡೀಸ್ ಎಂದರೆ ನನ್ನ ತಾಯಿ. ಅವರಿಗೆ ನಾನು ಗಂಡು ಮಗ, ಇನ್ನೊಬ್ಬರು ಮಗ್ದಲಿನ್ ಎನ್ನುವ ಹೆಣ್ಣು ಮಗಳು ಎಂದರೆ ಸರಿ. ಅವರನ್ನು ಕಾರವಾರದ ಕಡವಾಡಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಫಿಯಾದಾದ ಅವರ ತಂದೆಯ ಹೆಸರು ಸಿಮಾಂವ್ ರೊಡ್ರಿಗಸ್ ಎಂದರೆ ಸರಿ. ಅವರ ತಾಯಿಯ ರೆಕೆಲ್ ರೊಡ್ರಿಗಸ್ ಎಂದರೆ ಸರಿ.

ದಾವಾಸ್ತಿ ವಿಲ್ ಮೂಲಕ ನನಗೆ ಬಂದಿರುತ್ತದೆ. ಅದನ್ನು ನನ್ನ ತಾಯಿ ನನಗೆ ವಿಲ್ ಮೂಲಕ ನೀಡಿರುತ್ತಾರೆ. ನನ್ನ ತಾಯಿ 80 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾದ ಮೇಲೆ ಮೃತಪಟ್ಟಿರುತ್ತಾರೆ. ಅವರು ಮೃತಪಡುವ ಪೂರ್ವದಲ್ಲಿ ನನ್ನ ತಾಯಿಯನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ಹೆಂಡತಿ ಇಸ್ರೇಲನಲ್ಲಿ ಕೆಲಸ ಮಾಡುತ್ತಿದ್ದು ನನ್ನ ಮನೆಯಲ್ಲಿ ನಾನೊಬ್ಬನೇ ವಾಸ ಮಾಡುತ್ತಿದ್ದೇನೆ. ನನ್ನ ತಾಯಿಗೆ ಎಲ್ಲಾ ಶುಶ್ರೂಷೆಯನ್ನು ನಾನೇ ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿ. ಅವರು ಮೃತಪಡುವ 2-3 ವರ್ಷಗಳವರೆಗೂ ವೃದ್ಧಾಪ್ಯಕ್ಕೆ ಸಂಬಂಧಿಸಿದಂತೆ ಖಾಯಿಲೆಯಿಂದ ಅವರು ಬಳಲುತ್ತಿದ್ದರು ಎಂದರೆ ಸಾಕ್ಷಿ ಅವರು ಮೃತಪಡುವ 10 ವರ್ಷಗಳಿಂದ ಅನಾರೋಗ್ಯ ಪೀಡಿತರಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯನ್ನು ಆಟೋ ರಿಕ್ಷಾದ ಮೂಲಕ ಉಪ ನೋಂದಣಾಧಿಕಾರಿಯವರ ಕಚೇರಿ ಹೊನ್ನಾವರಕ್ಕೆ ಕರೆದುಕೊಂಡು ಬಂದು ವಿಲ್ ನಾಮೆಯನ್ನು ನೋಂದಣಿ ಮಾಡಿರುತ್ತೇನೆ. ಸದ್ರಿ ವಿಲ್ ನಾಮೆಯನ್ನು ತಯಾರಿಸಲು ದಸ್ತಾವೇಜು ಬರಹಗಾರರಿಗೆ ನಾನೇ ದಾಖಲೆ ಕೊಟ್ಟು ಮತ್ತು ಮಾಹಿತಿ ಕೊಟ್ಟು ಬರೆಸಿರುತ್ತೇನೆ ಎಂದರೆ ಸರಿ. ಸದ್ರಿ ವಿಲ್ ನಾಮೆಯನ್ನು ನನ್ನ ತಾಯಿ ಮೃತಪಡುವ ಮೂರು ವರ್ಷದ ಮುಂಚೆ ನೋಂದಣಿ ಮಾಡಿರುತ್ತಾರೆ ಸಾಕ್ಷಿ ಮುಂದುವರಿದು ಅದನ್ನು ಅವರೇ ಮಾಡಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ವಿಲ್ ನಾಮೆಗೆ ಇರುವ ಇಬ್ಬರು ಸಾಕ್ಷಿದಾರರನ್ನು ನಾನೇ ಹೇಳಿ ಮಾಹಿತಿ ಕೊಟ್ಟು ಉಪನೋಂದಣಾ ಕಚೇರಿಗೆ ಕರೆಸಿರುತ್ತೇನೆ ಎಂದರೆ ಸರಿ. ಸದ್ರಿ ವಿಲ್ ನಾಮೆಗೆ ನನ್ನ ತಾಯಿಯೇ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ.

ಸ.ನಂಃ 109 ರ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮದ ಎಷ್ಟು ಅಡಿ ದೂರದಲ್ಲಿ ದಾವಾಸ್ತಿ ಇದೆ ಎಂದು ಹೇಳಲು ಆಗುವುದಿಲ್ಲ. ದಾವಾ ಸ್ಥಳದ ಉತ್ತರ ಗಡಿ 60 ಅಡಿ ಇದೆ. ದಕ್ಷಿಣ ಗಡಿ 40 ಅಡಿ ಇದೆ. ಪೂರ್ವ ಗಡಿ ಎಷ್ಟು ಎಂದು ನನಗೆ ಗೊತ್ತಿಲ್ಲ. ಪಶ್ಚಿಮದ ಗಡಿ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ಥಳ ಪ್ರತಿವಾದಿಯ ಸ್ವಾಧೀನತೆಯಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಸಮೀಪ ಇದೆ ಎಂದು ನುಡಿಯುತ್ತಾರೆ. ದಾವಾ ಸ್ಥಳದಲ್ಲಿ ಪ್ರತಿವಾದಿಯರು ಬಾಳೆಯ ತೋಟ ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ತೋಟಕ್ಕೆ ಪಂಪ್ ಸೆಟ್ ಅಳವಡಿಸಿರುವುದಿಲ್ಲ. ಅಲ್ಲಿ ಒಂದು ಸರಕಾರಿ ಬಾವಿ ಇದೆ. ಈ ಪ್ರಕರಣ ದಾಖಲಾದ ಮೇಲೆ ಪ್ರತಿವಾದಿ ದಾವಾಸ್ತಿಯಲ್ಲಿ ಬಾಳೆ ತೋಟ ಮಾಡಿರುತ್ತಾರೆ. ಪ್ರತಿವಾದಿ ಹಾಕಿದ ತೆಂಗಿನ ಗಿಡಗಳು ದೊಡ್ಡದಾಗಿರುವುದಿಲ್ಲ. ಸದ್ರಿ
ದಾವಾಸ್ತಿಯಲ್ಲಿ ಇರುವ ಇಲೆಕ್ಟ್ರಿಸಿಟಿ ಬಿಲ್ಲನ್ನು ಯಾರು ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿ ಅಲ್ಲಿ ಇಲೆಕ್ಟ್ರಿಸಿಟಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿ ನ್ಯಾಯಾಲಯಕ್ಕೆ ಬಂದಿದ್ದರ ಕಾರಣ ನಾನು ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ನನ್ನ ತಾಯಿ ದಾಖಲು ಮಾಡಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.